ಶ್ರೀ ಡಿ. ಬಿ. ಇನಾಂದಾರ್.—ಈ ವರ್ಷ ಔರಾದ್‌ನ ಸಾರ್ವಜನಿಕ ಆಸ್ಪತ್ರೆಗೆಲ್ಲಿ ರೂ. ೧೨೯ ೭೪–೮೯, ಸರಬರಾಜು ಮಾಡಲಾಗಿದೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಾಂತಾಪುರ ಆಸ್ಪತ್ರೆಯಿಂದ ಇಂಡೆಂಟ್ ಬಂದಿಲ್ಲ. ಕಮಲಾ ನಗರದ್ದು ರೂ. ೨೩ ೫೬೭–೨೪. ಮಂಧೋಳ್ ರೂ. ೯,೨೩೩–೮೪, ಪ್ರಾಥಮಿಕ ಆರೋಗ್ಯ ಕೇಂದ್ರಹೋರಿಸವಂದ್ರ ರೂ. ೯೨೩೩–೮೪, ಪ್ರಾಥಮಿಕ ಆರೋಗ್ಯ ಘಟಕ ಡಾಂಗಾಸ್ ರೂ. ೯೨೩೩–೮೪,ಪ್ರಾಥಮಿಕ ಆರೋಗ್ಯ ಘಟಕ ವಡಗಾಂವ ಇಲ್ಲಿ ಸರಬರಾಜು ಆಗಿಲ್ಲ. ಸಧ್ಯದಲ್ಲೇ ಆಗುವ ಸಿದ್ಧತೆಇರುತ್ತದೆ. ತಾನಾ ಕುಶನೂರು ಪ್ರಾಥಮಿಂಕ ಆರೋಗ್ಯ ಘಟಕಕ್ಕೆ ರೂ. ೯೨೩೩–೮೪, ಚಿಟಕಿ ರೂ.೯೨೩೩–೮೪. ಜೋರಡಾನಿ ೯೨೩೩–೮೪, ಮತ್ತು ತೋರಾನಾ ರೂ ೯೩೨೨–೮೪.

ಪ್ರಶ್ನೆ ೧೨೪೮ – ಮಾನ್ಯ ಸದಸ್ಯರು (ಶ್ರೀ ಕೆ. ವಿ. ರವೀಂದ್ರನಾಥಬಾಬು) ಹಾಜರಿರಲಿಲ್ಲ.

ಪ್ರಶ್ನೆ ೧೦೯೭ – ಮಾನ್ಯ ಸದಸ್ಯರಾದ ಶ್ರೀ ಸಿ. ಕಣ್ಣನ್ ಹಾಜರಿಲ್ಲ.

ಪ್ರಶ್ನೆ ೧೦೭೮ – ಮಾನ್ಯ ಸದಸ್ಯರಾದ ಶ್ರೀ ಮಹಮದ್ ಒಮರ್ ಹಾಜರಿಲ್ಲ.

ಪ್ರಶ್ನೆ ೧೩೬೧ – ಮಾನ್ಯ ಸದಸ್ಯರಾದ ಶ್ರೀ ಡಿ. ಟಿ. ಜಯಕುಮಾರ್ ಹಾಜರಿಲ್ಲ.

ಪ್ರಶ್ನೆ ೧೨೭೨ – ಮಾನ್ಯ ಸದಸ್ಯರಾದ ಶ್ರೀ ಪಂಪಾವತಿ ಹಾಜರಿಲ್ಲ.

ಪ್ರಶ್ನೆ ೫೭೮ - ಮಾನ್ಯ ಸದಸ್ಯರಾದ ಶ್ರೀ ಆರ್. ಎನ್. ನಾಯಕ್ ಹಾಜರಿಲ್ಲ.

ಪ್ರಶ್ನೆ ಸಂಖ್ಯೆ ೫೬೯

ಶ್ರೀ ಕೆ. ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಉಪಪ್ರಶ್ನೆ ಎಂದರೆ, ಈ ವರ್ಷದ ಬಜೆಟ್ಟಿನಲಿ ಎಷ್ಟು ಮೊತ್ತ ಕಾದಿರಿಸಿದ್ದೀರಿ ? ಮತ್ತು ಹೋದವರ್ಷ ಬಜೆಟ್ಟಿನಲ್ಲಿ ಬಂದಂಥ ಕಾರ್ಯಕ್ರಮ ಒಂದು ವರ್ಷ ಗತಿಸಿದರೂ ಸಹಿತ ಆಡಳಿತಾತ್ಮಕ ಮಂಜೂರಾತಿ ದೊರಕಲು ತಡವಾಗಿಲ್ಲವೇ ? ಇದಕ್ಕೆ ಯಾರು ಜವಾಬ್ದಾರರು ? ಕಟ್ಟಡವನ್ನು ಪೂರ್ತಿ ಮಾಡಲಿಕ್ಕೆ ಬಹಳ ದಿವಸ ಬೇಕಾಗುತ್ತದೆ. ಅಲ್ಲಿಯಂವರೆಗೆ ನಗರಸಭೆಯವರೇ ತಾತ್ಕಾಲಿಕವಾಗಿ ನಡೆಸಲಿಕ್ಕೆ ವ್ಯವಸ್ಥೆ ಮಾಡಿಕೊಟ್ಟರೆ, ಸಿಬ್ಬಂದಿವರ್ಗದವರನ್ನು ತಾವು ಮಂಜೂರು ಮಾಡುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್.—ಒಂದುವೇಳೆ ನಗರಸಭೆಯವರು ವ್ಯವಸ್ಥೆ ಮಾಡಿಕೊಟ್ಟರೆ ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು. ಆದೂ ಅಲ್ಲದೆ, ಸುಮಾರು ೧೨ ಲಕ್ಷ, ೮೦ ಸಾವಿರ ವೆಚ್ಚದಲ್ಲಿ ಮೊದಲನೇ ಹಂತದಲ್ಲಿ ಯೋಜನೆಯನ್ನು ಕೈಗೊಂಡಿದೆ. ೪ ಲಕ್ಷ ರೂಪಾಯಿಗಳನ್ನು ಈ ವರ್ಷದ ಬಜೆಟ್ಟಿನಲ್ಲಿ ಇಟ್ಟಿದೆ, ತೀವ್ರಗತಿಯಲ್ಲಿ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಇದನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಆರಕ್ಷಕ ವಲಯಗಳು.

೧೫೦೦ ಶ್ರೀ ಬಿ. ಜೆ. ಜಮಖಂಡಿ(ಮಂಧೋಳ್).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ೧೯೪೪–೮೫ ರಲ್ಲಿ ಎಷ್ಟು ಪೋಲೀಸ್ ವಲಯ ಹಾಗೂ ಉಪವಲಯಗಳನ್ನು ಮಂಜೂರು ಮಾಡಲಾಗಿತ್ತು ?

ಆ) ವಿಜಾಪುರ ಜಿಲ್ಲೆಯಲ್ಲಿ ಎಷ್ಟು ವಲಯಂಗಳಿಗೆ ಮಂಜೂರು ಮಾಡಲಾಗಿದೆ

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಬಿ. ರಾಚಯ್ಯ(ಗೃಹ ಮಂತ್ರಿಗಳು).—

ಅ) ೧) ಪೋಲೀಸ್ ವಲಯ (ವೃತ್ತ) ... ೧೬

೨) ಪೋಲೀಸ್ ಉಪ ವಲಯ ... ೧೯
(ಪೋಲೀಸ್ ಠಾಣೆ)

೩) ಹೊರವಲಯ (ಔಟ್ ಪೋಸ್ಟ್) ... ೨

ಆ) ೧೯೮೪-೮೫ ರಲ್ಲಿ ವಿಜಾಪುರ ಜಿಲ್ಲೆಯಲ್ಲಿ ವಲಯಗಳಾವುವೂ ಮಂಜೂರಾಗಿರುವುದಿಲ್ಲ.

ಇ) ೧೯೮೫-೮೬ ರಿಂದ ೧೯೯೯-೯೦ ರ ವರೆಗೆ ತಯಾರಿಸಲಾಗಿರುವ ಪೂರ್ವಯೋಜಿತ ಯೋಜನೆಯಲ್ಲಿ ಹೊಸ ಪ್ರಸ್ತಾಪಗಳನ್ನು ಅಳವಡಿಸಲು ಪರಿಶೀಲಿಸಲಾಗುವುದು.

ಸರ್ಕಾರೀ ಸಾರ್ವಜನಿಕ ಆಸ್ಪತ್ರೆ.

೫೬೯. ಶ್ರೀ ಕೆ. ಬಿ. ಕೋಳಿವಾಡ(ರಾಣೆಬೆನ್ನೂರು). —ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ನಗರಕ್ಕೆ ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು ಮಂಜೂರು ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಯೋಜನೆಯ ಒಟ್ಟು ವೆಚ್ಚವೆಷ್ಟು ?

ಇ) ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿದ ಒಟ್ಟು ಮೊತ್ತವೆಷ್ಟು ?

ಈ) ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಜೆಟ್‌ನಲ್ಲಿ ಸೇರಿಸಲಾಗಿದೆ. ಮಂಜೂರಾತಿ ವಿಷಯ ಪರಿಶೀಲನೆಯಲ್ಲಿದೆ.

ಆ) ೨೭.೭೭ ಲಕ್ಷ ರೂಪಾಯಿಗಳು.

ಇ) ೪.೦೦ ಲಕ್ಷ ರೂಪಾಯಿಗಳು.

(ಈ) ಯೋಜನೆಯನ್ನು ಮಂಜೂರು ಮಾಡಿದ ನಂತರ.

ಪ್ರಶ್ನೆ. ೧೪೯೧—ಮಾನ್ಯ ಸದಸ್ಯರಾದ ಶ್ರೀ ರವಿವಾಥ ರೈ ಹಾಜರಿಲ್ಲ.

ಪ್ರಶ್ನೆ. ೧೪೮೨—ಮಾನ್ಯ ಸದಸ್ಯರಾದ ಶ್ರೀ ಜಿ. ರಾಮಕೃಷ್ಣ ಹಾಜರಿಲ್ಲ.

ಶ್ರೀ ಬಿ. ಜೆ. ಜಮಖಂಡಿ —ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆ ವಿಸ್ತೀರ್ಣ ದೃಷ್ಟಿಯಲ್ಲಿ ರಾಜ್ಯದಲ್ಲೇ ಮೊದಲನೇ ಸ್ಥಾನದಲ್ಲಿದ್ದು, ಜನಸಂಖ್ಯೆ ದೃಷ್ಟಿಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನದಲ್ಲಿದೆ. ಆಗಾಗ್ಗೆ ಬಿಜಾಪುರ, ಬಾಗಲಕೋಟೆ, ಜಮಖಂಡಿಗಳಲ್ಲಿ ಈ ಕೋಮು ಗಲಭೆ, ಕಾರ್ಮಿಕರ ಘರ್ಷಣೆ, ಆಗುತ್ತಿರುವುದರಿಂದ, ಈ ಘರ್ಷಣೆಗಳನ್ನು ನಿಯಂತ್ರಿಸುವ ಸಲುವಾಗಿ ಹೆಚ್ಚು ಪೋಲೀಸ್ ವಲಯ ಗಳನ್ನು, ಉಪ ವಲಯಗಳನ್ನು ಮತ್ತು ಔಟ್‌ಪೋಸ್ಟ್‌ಗಳನ್ನು ಮಾಡುವುದರಿಂದ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ ೧೯೮೪-೮೫ರ ಅವಧಿಯಲ್ಲಿ ಒಂದೂ ಕೂಡ ಈ ಬಗ್ಗೆ ಮಂಜೂರಾಗಿಲ್ಲ ವೆಂದರೆ ಅದು ತಪ್ಪಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು, ೮೫-೮೬ ರಿಂದ ೯೦ರವರೆಗೆ ಈ ಯೋಜನೆಅಡಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಈ ವಿಷಯದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಈ ಗಲಭೆ, ಘರ್ಷಣೆಗಳನ್ನು ತಪ್ಪಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಕಳೆದ ವರ್ಷದಲ್ಲಿ ಬರ ಬಂದಿದ್ದರಿಂದ ಜಾಗಕ್ಕೆ ಹೆಚ್ಚಾಗಿ ಹಣ ಒದಗಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದಕ್ಕೋಸ್ಕರ ಈ ಹೊಸ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಲಿಕ್ಕಾಗಲಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಐದು ಉಪವಿಭಾಗಗಳು ಬೇಕು ಎಂದು ಕೇಳಿದ್ದಾರೆ. ಐದು ಸರ್ಕಲ್‌ಗಳು ಬೇಕೆಂದೂ ಮತ್ತು ಹದಿನಾರು ಹೊಸ ಪೋಲೀಸ್ ಠಾಣೆಗಳು ಬೇಕೆಂದು ಹೇಳಿದ್ದಾರೆ. ೮೬-೯೭ರಿಂದ ೯೦ವರೆಗೆ ಇದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.